KATK920011902025

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ,** ತಿಪಟೂರು.

ಉಪಸ್ಥಿತರುಃ ಶ್ರೀ ಭರತ್ ಚಂದ್ರ ಕೆ.ಎಸ್., ಬಿ.ಎ. ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದಂ.ನ್ಯಾದಂ., ತಿಪಟೂರು

ದಿನಾಂಕಃ **03.06.2026**

**ಸಿ.ಸಿ.ನಂ.788/2025**

ಸರ್ಕಾರದ ಪರವಾಗಿಃ ಕಿಬ್ಬನಹಳ್ಳಿ ಪೊಲೀಸ್ ಪಿ.ಎಸ್.ಐ

(ಸರ್ಕಾರದ ಪರವಾಗಿ ಸ.ಸ.ಅ.ರವರು ಪ್ರತಿನಿಧಿಸುತ್ತಾರೆ )

-ವಿರುದ್ಧ-

ಆರೋಪಿತರುಃ **1.** ನರಸಿಂಹಮೂರ್ತಿ ತಂದೆ ವೆಂಕಟಯ್ಯ,
ವಯಸ್ಸು 35 ವರ್ಷ,
ವಾಸಃ ರಜತಾದಿಪುರ ಗ್ರಾಮ,
ಕಿಬ್ಬನಹಳ್ಳಿ ಹೋಬಳಿ,
ತಿಪಟೂರು ತಾಲ್ಲೂಕು,
ತುಮಕೂರು.

**2.** ಕೃಷ್ಣಮೂರ್ತಿ ತಂದೆ ನರಸಿಂಹಯ್ಯ,
ವಯಸ್ಸು 40 ವರ್ಷ,
ವಾಸಃ ರಜತಾದಿಪುರ ಗ್ರಾಮ,
ಕಿಬ್ಬನಹಳ್ಳಿ ಹೋಬಳಿ,
ತಿಪಟೂರು ತಾಲ್ಲೂಕು,
ತುಮಕೂರು.

**3.** ಅನುಸೂಯ ತಂದೆ ಕೃಷ್ಣಮೂರ್ತಿ,
ವಯಸ್ಸು 35 ವರ್ಷ,
ವಾಸಃ ರಜತಾದಿಪುರ ಗ್ರಾಮ,
ಕಿಬ್ಬನಹಳ್ಳಿ ಹೋಬಳಿ,
ತಿಪಟೂರು ತಾಲ್ಲೂಕು,
ತುಮಕೂರು.

**4.** ರೇಖಾ ಕೋಂ ನರಸಿಂಹಮೂರ್ತಿ,
ವಯಸ್ಸು 30 ವರ್ಷ,
ವಾಸಃ ರಜತಾದಿಪುರ ಗ್ರಾಮ,

ಕಿಬ್ಬನಹಳ್ಳಿ ಹೋಬಳಿ,
ತಿಪಟೂರು ತಾಲ್ಲೂಕು,
ತುಮಕೂರು.

(ಶ್ರೀ ಎನ್ ಎಮ್, ವಕೀಲರು)

...........

| | |
|---|---|
| ಅಪರಾಧದ ವರದಿಯನ್ನು ಸಲ್ಲಿಸಿದ ದಿನಾಂಕಃ- | 09.03.2025 |
| ಅಪರಾಧ ನಡೆದ ದಿನಾಂಕಃ- | 07.03.2025 |
| ಅಪರಾಧದ ಕಾಯಿದೆ ಮತ್ತು ಕಲಂಃ- | ಭಾರತೀಯ ನ್ಯಾಯಾ ಸಂಹಿತ 189(2), 115(2), 352, 126(2), 351(3), 74 ಸಹವಾಚಕ 190 ಬಿ.ಎನ್.ಎಸ್ ಕಾಯ್ದೆ |
| ಸಾಕ್ಷಿ ವಿಚಾರಣೆಯನ್ನು ಮಾಡಿದ ದಿನಾಂಕಃ- | 13.05.2026 |
| ಸಾಕ್ಷಿ ವಿಚಾರಣೆಯನ್ನು ಮುಗಿಸಿದ ದಿನಾಂಕಃ- | 13.05.2026 |
| ನ್ಯಾಯಾಧೀಶರ ಅಭಿಪ್ರಾಯಃ- | ಆರೋಪಿತರು ಬಿಡುಗಡೆಗೆ ಅರ್ಹರಾಗಿರುತ್ತಾರೆ. |

## :: ತೀರ್ಪು::

ಕಿಬ್ಬನಹಳ್ಳಿ ಪೋಲಿಸ್ ಠಾಣೆಯ ಪೊಲೀಸ್ ಉಪನಿರೀಕ್ಷಕರು, ಆರೋಪಿತರ ವಿರುದ್ಧ ಭಾರತೀಯ ನ್ಯಾಯಾ ಸಂಹಿತ ಕಲಂ 189(2), 115(2), 352, 126(2), 351(3), 74 ಸಹವಾಚಕ 190 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತಾರೆಂದು ಪ್ರಸ್ತುತ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ

**2.** ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ:-

ಅಭಿಯೋಜನೆಯವರು ಆರೋಪಿಸಿದಂತೆ ದಿನಾಂಕ: 07.03.2025 ರಂದು ಬೆಳಿಗ್ಗೆ 09.00 ಗಂಟೆ ಸಮಯದಲ್ಲಿ ಕಿಬ್ಬನಹಳ್ಳಿ ಪೊಲೀಸ್ ಠಾಣಾ ಸರಹದ್ದು, ರಜತಾದ್ರಿಪುರ ಗ್ರಾಮದ ರಜತಾದ್ರಿಪುರ-ಗೋಡೆಕೆರೆ ರಸ್ತೆಯ ದಕ್ಷಿಣದ ಕಡೆಗೆ ತೋಟಗಳಿಗೆ ಹೋಗುವ ಮಣ್ಣು ರಸ್ತೆಯ ಪ್ರಾರಂಭದಿಂದ 15 ಅಡಿ ದಕ್ಷಿಣದ ಕಡೆ ಮಣ್ಣು ರಸ್ತೆಯಲ್ಲಿ ಚಾಸಾ.2 ನಾಗೇಶ್ ರವರ ಬಾಬ್ತು ಕೆಎ.64.4085 ನೇ ನಂಬರಿನ BAJAJ MAXIMA ಆಟೋದಲ್ಲಿ ಚಾಸಾ.1 ಪ್ರೇಮ ಯು.ಆರ್, ಚಾಸಾ.2 ನಾಗೇಶ್ ಹಾಗೂ ಚಾಸಾ.3 ಹೇಮಲತರವರುಗಳು ತೋಟದ ಮನೆಯಿಂದ ಮನೆಗೆ ಬರುವಾಗ 1 ನೇ ಆರೋಪಿತರು ದಾರಿಯಲ್ಲಿ ಕೆಎ.44.ಇಎ.2200 ನೇ ನಂಬರಿನ Hero SPLENDOR+ ಬೈಕನ್ನು ಅಡ್ಡ ನಿಲ್ಲಿಸಿ ನಿಂತಿದ್ದಾಗ ಚಾಸಾ.2 ನಾಗೇಶ್ ರವರು ಆಟೋ ನಿಲ್ಲಿಸಿ ದಾರಿ ಬಿಡು ಎಂದು ಕೇಳಿದಾಗ ನಮ್ಮನ್ನು ಏಕಾಏಕಿ ಯಾಕೋ ಸೂಳೆ ಮಗನೇ ಎಂದು ಮನಬಂದತೆ ನಿಂದಿಸಿ ರೋಡ್ ಏನು ನಿಮ್ಮ ಅಪ್ಪಂದ ಎಂದು ಕೊರಳ ಪಟ್ಟಿ ಹಿಡಿದು ಹೊಡೆದ, ನಾನು ನಿನ್ನನ್ನು ಉಳಿಸುವುದಿಲ್ಲ ಸಾಯಿಸಿ ಬಿಡುತ್ತೇನೆ ಎಂದು ಹೇಳಿ ಹೊಡೆಯಲು ಮುಂದಾದಾಗ ಚಾಸಾ.1 ಪ್ರೇಮ ಆರ್.ಯು, ಚಾಸಾ.2 ನಾಗೇಶ್ ಹಾಗೂ ಚಾಸಾ.3 ಹೇಮಲತಾರವರು ಕೀರಾಡಿದಾಗ 1 ನೇ ಆರೋಪಿತರು ಚಾಸಾ.1 ಪ್ರೇಮ ಯು.ಆರ್

ರವರನ್ನು ಹಿಡಿದು ಸೂಳೇ ಮುಂಡೆ ದನಗಳನ್ನು ಬಿಟ್ಟು ನಮ್ಮ ಹೊಲದಲ್ಲಿ ತೆಂಗಿನ ಸಸಿಯನ್ನು ಕಡಿಸಿದ್ದೀಯಾ ಎಂದು ದೌರ್ಜನ್ಯ ಮಾಡುತ್ತಿದ್ದಾಗ ಅವರ ಮನೆಯವರಾದ 2, 3 ಹಾಗೂ 6 ನೇ ಆರೋಪಿತರು ಚಾಸಾ.1 ರಿಂದ 4 ರವರುಗಳನ್ನು ನಿಂದಿಸಿ ಮತ್ತು ಕೈಗಳಿಂದ ಹೊಡೆಯುತ್ತಿದ್ದಾಗ ಚೀರಾಟ ಕೇಳಿಸಿಕೊಂಡು ಚಾಸಾ.4 ರವರು ಬಂದು 1 ನೇ ಆರೋಪಿತರನ್ನು ಕೇಳಿದಾಗ ಏಕಾಏಕಿ ಚಾಸಾ.1 ರವರಿಗೆ ಸೊಂಟಕ್ಕೆ ಕಾಲಿನಿಂದ ಹೊದ್ದು ಇವರನ್ನು ಯಾರನ್ನು ಉಳಿಸಬಾರದು ಸೂಳೇ ಮುಂಡೆರಾ ನಿಮ್ಮನ್ನು ಜೆಸಿಪಿಯಿಂದ ಮನೆಯನ್ನು ನಾಶ ಮಾಡುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿ ಚಾಸಾ.1 ಪ್ರೇಮ ಆರ್.ಯು ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು ಅಂತ ಈ ಕುರಿತು ಚಾಸಾ-1 ಪ್ರೇಮ ಆರ್.ಯು. ರವರು ಕಿಬ್ಬನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದು ಅದರ ಆಧಾರದ ಮೇಲೆ ಪೊಲೀಸರು ತಮ್ಮ ಠಾಣಾ ಗುನ್ನಾ ನಂ.21/2025 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ತಮ್ಮ ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ಗುನ್ನಾ ಜಾಗೆಯ ಪಂಚನಾಮೆಯನ್ನು ಮಾಡಿಕೊಂಡು ಸಾಕ್ಷಿಗಳ ಹೇಳಿಕೆಗಳನ್ನು ಪಡೆದುಕೊಂಡು ತನಿಖೆ ಪೂರ್ಣಗೊಂಡ ನಂತರ ಆರೋಪಿತರ ವಿರುದ್ಧ ಭಾರತೀಯ ನ್ಯಾಯಾ

ಸಂಹಿತ ಕಲಂ 189(2), 115(2), 352, 126(2), 351(3), 74 ಸಹವಾಚಕ 190 ರಡಿಯಲ್ಲಿ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ

**3.** ಆರೋಪಿತರು ಗುನ್ನೆ ದಾಖಲಾದ ನಂತರ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ದೋಷಾರೋಪಣಾ ಪತ್ರ ಸಲ್ಲಿಸಿದ ನಂತರ ಅಪರಾಧ ಕುರಿತು ಸಂಜ್ಞೆ ತೆಗೆದುಕೊಂಡ ಸಮನ್ಸ್ ಮೂಲಕ ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಕೊಳ್ಳಲಾಯಿತು.

**4.** ದಂ.ಪ್ರ.ಸಂ ಕಲಂ 207 ರ ಅನ್ವಯ ದೋಷಾರೋಪಣ ಪತ್ರದ ನಕಲು ಪ್ರತಿಯನ್ನು ಆರೋಪಿತರಿಗೆ ಪೂರೈಸಲಾಯಿತು. ನಂತರ ದೋಷಾರೋಪಣೆಯನ್ನು ರಚಿಸಿ ಆರೋಪಿತರಿಗೆ ಓದಿ ಹೇಳಲಾಗಿ ಆರೋಪಿತರು ಸದರಿ ಆಪಾದನೆಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

**5.**ಅಭಿಯೋಜನೆಯು ಆರೋಪಿತರ ಮೇಲೆ ಆರೋಪಣೆಗಳನ್ನು ರುಜುವಾತು ಪಡಿಸುವ ಸಲುವಾಗಿ ಒಟ್ಟು 5 ಸಾಕ್ಷಿಗಳನ್ನು ಫಿರ್ಯಾದಿ ಸಾಕ್ಷಿ ಪ್ರಾಸಾ-1 ರಿಂದ 5 ರವರನ್ನು ವಿಚಾರಣೆಗೂಳಪಡಿಸಿ ನಿಪಿ-1 ರಿಂದ 8 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು.

**6.**ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತು ಪಡಿಸಲು ಪಿರ್ಯಾದುದಾರರನ್ನು ಪ್ರಾಸಾ.1 ಆಗಿ ಹಾಗೂ ಪ್ರಾಸಾ.2, 3, 4, 5 ರವರು

ಘಟನೆಯ ಪ್ರತ್ಯಕ್ಷ ಸಾಕ್ಷಿದಾರರನ್ನು ವಿಚಾರಣೆ ಮಾಡಿರುತ್ತಾರೆ. ಪಿರ್ಯಾದುದಾರರ ವಿಚಾರಣೆಯಾದ ನಂತರ ಮಾನ್ಯ ಸಹಾಯಕ ಅಭಿಯೋಜಕರು ಇತರೆ ಸಾಕ್ಷಿಗಳಿಗೆ ಸಮನ್ಸ್ ನ್ನು ಹೊರಡಿಸಲು ಕೋರಿಕೊಂಡಿರುತ್ತಾರೆ. ಈ ಪ್ರಕರಣದಲ್ಲಿ ಪಿರ್ಯಾದುದಾರರು ಮತ್ತು ಪ್ರತ್ಯಕ್ಷ ಸಾಕ್ಷಿದಾರರು ತಮ್ಮ ವಿಚಾರಣೆಯಲ್ಲಿ ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಹೀಗಾಗಿ ಇತರೆ ಸಾಮಾನ್ಯ ಸಾಕ್ಷಿಗಳ ವಿಚಾರಣೆ ಅನಾವಶ್ಯಕವಾಗಿರುತ್ತದೆ. ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಲಾಯಿತು ಹಾಗೂ ಇತರೆ ಸಾಕ್ಷಿಗಳ ವಿಚಾರಣೆಯನ್ನು ಕೈ ಬಿಡಲಾಯಿತು. ಅಭಿಯೋಜನೆಯ ವಿಚಾರಣೆಯಲ್ಲಿ ಆರೋಪಿತರ ವಿರುದ್ಧ ಯಾವುದೇ ಅಂಶಗಳು ಕಂಡು ಬರದ ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಅಡಿಯಲ್ಲಿ ಆರೋಪಿತರ ಹೇಳಿಕೆಗೆ ವಿನಾಯಿತಿ ನೀಡಲಾಗಿದೆ. ಆರೋಪಿತರು ತಮ್ಮ ಪ್ರತಿ ರಕ್ಷಣೆಗೆ ಯಾವುದೇ ಸಾಕ್ಷಿಯನ್ನು ಮಾಡಿಸಿರುವುದಿಲ್ಲ.

**7.** ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿತರ ಪರ ವಕೀಲರ ವಾದ ವಿವಾದವನ್ನು ಕೇಳಲಾಯಿತು.

**8.** ಈ ಪ್ರಕರಣವನ್ನು ತೀರ್ಮಾನಿಸಲು ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತದೆಃ-

<u>ಅಂಶಗಳು</u>

**1)** ದಿನಾಂಕಃ07.03.2025 ರಂದು ಬೆಳಿಗ್ಗೆ 09.00 ಗಂಟೆ ಸಮಯದಲ್ಲಿ ಕಿಬ್ಬನಹಳ್ಳಿ ಪೊಲೀಸ್ ಠಾಣಾ ಸರಹದ್ದು, ರಜತಾದ್ರಿಪುರ ಗ್ರಾಮದ ರಜತಾದ್ರಿಪುರ-ಗೋಡೆಕೆರೆ ರಸ್ತೆಯ ದಕ್ಷಿಣದ ಕಡೆಗೆ ತೋಟಗಳಿಗೆ ಹೋಗುವ ಮಣ್ಣು ರಸ್ತೆಯ ಪ್ರಾರಂಭದಿಂದ *15* ಅಡಿ ದಕ್ಷಿಣದ ಕಡೆ ಮಣ್ಣು ರಸ್ತೆಯಲ್ಲಿ, ಚಾಸಾ.*2* ನಾಗೇಶ್‌ರವರ ಬಾಬ್ತು, *KA.64.4085* ನೇ ನಂಬರಿನ *BAJAJ MAXIMA* ಆಟೋದಲ್ಲಿ ಚಾಸಾ.*1* ಪ್ರೇಮ, ಚಾಸಾ.*2* ನಾಗೇಶ್ ಹಾಗೂ ಚಾಸಾ.*3* ಹೇಮಲತಾರವರುಗಳು ತೋಟದ ಮನೆಯಿಂದ ಮನೆಗೆ ಬರುವಾಗ *1* ನೇ ಆರೋಪಿತರಾದ ನೀವು ದಾರಿಯಲಿ, *KA.44.EA.2200* ನೇ ನಂಬರಿನ *Hero SPLENDOR+* ಬೈಕನ್ನು ಅಡ್ಡ ನಿಲ್ಲಿಸಿ ಅಕ್ರಮವಾಗಿ ತಡೆದು ನಿಲ್ಲಿಸಿದ್ದು, ಈ ಮೂಲಕ ಭಾರತೀಯ ನ್ಯಾಯಾ ಸಂಹಿತ ಕಲಂ ***126(2)*** ಸಹವಾಚಕ ***190*** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ ಎಂದು ಆಪಾಧಿಸಲಾಗಿದೆ.

**2)** ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಚಾಸಾ.*1* ಪ್ರೇಮ, ಚಾಸಾ.*2* ನಾಗೇಶ್ ಹಾಗೂ ಚಾಸಾ.*3* ಹೇಮಲತಾರವರು ತೋಟದ ಮನೆಯಿಂದ ಮನೆಗೆ ಬರುವಾಗ

ಆರೋಪಿತರಾದ ನೀವುಗಳು ಅಕ್ರಮ ಗುಂಪು ಕಟ್ಟಿಕೊಂಡು ಬಂದಿದ್ದು, ಈ ಮೂಲಕ ಭಾರತೀಯ ನ್ಯಾಯಾ ಸಂಹಿತ ಕಲಂ ***189(2)*** ಸಹವಾಚಕ ***190*** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ ಎಂದು ಆಪಾಧಿಸಲಾಗಿದೆ.

**3)** ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವುಗಳು ಚಾಸಾ.*2* ನಾಗೇಶ್ ರವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, ಈ ಮೂಲಕ ಭಾರತೀಯ ನ್ಯಾಯಾ ಸಂಹಿತ ಕಲಂ ***352*** ಸಹವಾಚಕ ***190*** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ ಎಂದು ಆಪಾಧಿಸಲಾಗಿದೆ.

**4)** ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವುಗಳು ಚಾಸಾ.*1* ಪ್ರೇಮಾರವರಿಗೆ ಹಿಡಿದು ಸೂಳೇ ಮುಂಡೆ ದನಗಳನ್ನು ಬಿಟ್ಟು ಹೊಲದಲ್ಲಿ ತೆಂಗಿನ ಸಸಿಯನ್ನು ಕಡಿಸಿದ್ದೀಯಾ ಎಂದು ದೌರ್ಜನ್ಯ ಮಾಡಿದ್ದು, ಈ ಮೂಲಕ ಭಾರತೀಯ ನ್ಯಾಯಾ ಸಂಹಿತ ಕಲಂ ***74*** ಸಹವಾಚಕ ***190*** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ ಎಂದು ಆಪಾಧಿಸಲಾಗಿದೆ.

**5)** ಐದನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, *2, 3, 6* ನೇ ಆರೋಪಿತರು ಚಾಸಾ.*1* ರಿಂದ *4* ರವರಿಗೆ ನಿಂದಿಸಿ ಮತ್ತು ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಈ ಮೂಲಕ ಭಾರತೀಯ ನ್ಯಾಯಾ ಸಂಹಿತ ಕಲಂ ***115(2)*** ಸಹವಾಚಕ ***190*** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ ಎಂದು ಆಪಾಧಿಸಲಾಗಿದೆ.

**6)** ಕೊನೇಯದಾಗಿ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ *1* ನೇ ಆರೋಪಿತರಾದ ನೀವು ಚಾಸಾ.*1* ಪ್ರೇಮರವರಿಗೆ ಪ್ರಾಣ ತೆಗೆಯುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿದ್ದು, ಈ ಮೂಲಕ ಭಾರತೀಯ ನ್ಯಾಯಾ ಸಂಹಿತ ಕಲಂ ***351(3)*** ಸಹವಾಚಕ ***190*** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ ಎಂದು ಆಪಾಧಿಸಲಾಗಿದೆ.

**7)** ಯಾವ ಆದೇಶ ?

**9.** ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿದೆಃ

ಅಂಶ ನಂ.1 ರಿಂದ 6 : ನಕಾರಾತ್ಮ ಕವಾಗಿ

ಅಂಶ ನಂ.7 : ಕೆಳಗಿನ ಆದೇಶದಂತೆ,

**:: ಕಾರಣಗಳು ::**

**10.** ಅಂಶ **1** ರಿಂದ **6 :-** ಈ ಎಲ್ಲಾ ಅಂಶಗಳು ಒಂದಕ್ಕೊಂದು ಪರಸ್ಪರ ಸಂಬಂಧ ಇರುವುದರಿಂದ ಮತ್ತು ಪುನರಾವರ್ತನೆ ತಪ್ಪಿಸುವ ಸಲುವಾಗಿ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**11.** ಅಭಿಯೋಜನೆಯವರು ಈ ಪ್ರಕರಣದಲ್ಲಿ ಆರೋಪಿಸಿದಂತೆ ದಿನಾಂಕ: 07.03.2025 ರಂದು ಬೆಳಿಗ್ಗೆ 09.00 ಗಂಟೆ ಸಮಯದಲ್ಲಿ ಕಿಬ್ಬನಹಳ್ಳಿ ಪೊಲೀಸ್ ಠಾಣಾ ಸರಹದ್ದು, ರಜತಾದ್ರಿಪುರ ಗ್ರಾಮದ ರಜತಾದ್ರಿಪುರ-ಗೋಡೆಕೆರೆ ರಸ್ತೆಯ ದಕ್ಷಿಣದ ಕಡೆಗೆ ತೋಟಗಳಿಗೆ ಹೋಗುವ ಮಣ್ಣು ರಸ್ತೆಯ ಪ್ರಾರಂಭದಿಂದ 15 ಅಡಿ ದಕ್ಷಿಣದ ಕಡೆ ಮಣ್ಣು ರಸ್ತೆಯಲ್ಲಿ ಚಾಸಾ.2 ನಾಗೇಶ್ ರವರ ಬಾಬ್ತು ಕೆಎ.64.4085 ನೇ ನಂಬರಿನ BAJAJ MAXIMA ಆಟೋದಲ್ಲಿ ಚಾಸಾ.1 ಪ್ರೇಮ ಯು.ಆರ್, ಚಾಸಾ.2 ನಾಗೇಶ್ ಹಾಗೂ ಚಾಸಾ.3 ಹೇಮಲತಾರವರುಗಳು ತೋಟದ ಮನೆಯಿಂದ ಮನೆಗೆ ಬರುವಾಗ 1 ನೇ ಆರೋಪಿತರು ದಾರಿಯಲ್ಲಿ ಕೆಎ.44.ಇಎ.2200 ನೇ ನಂಬರಿನ Hero SPLENDOR+ ಬೈಕನ್ನು ಅಡ್ಡ ನಿಲ್ಲಿಸಿ ನಿಂತಿದ್ದಾಗ ಚಾಸಾ.2 ನಾಗೇಶ್ ರವರು ಆಟೋ ನಿಲ್ಲಿಸಿ ದಾರಿ ಬಿಡು ಎಂದು ಕೇಳಿದಾಗ ನಮ್ಮನ್ನು ಏಕಾಏಕಿ ಯಾಕೋ ಸೂಳೆ ಮಗನೇ ಎಂದು ಮನಬಂದತೆ ನಿಂದಿಸಿ ರೋಡ್ ಏನು ನಿಮ್ಮ ಅಪ್ಪಂದ ಎಂದು ಕೊರಳ ಪಟ್ಟಿ ಹಿಡಿದು ಹೊಡೆದ, ನಾನು ನಿನ್ನನ್ನು ಉಳಿಸುವುದಿಲ್ಲ ಸಾಯಿಸಿ

ಬಿಡುತ್ತೇನೆ ಎಂದು ಹೇಳಿ ಹೊಡೆಯಲು ಮುಂದಾದಾಗ ಚಾಸಾ.1 ಪ್ರೇಮ ಆರ್.ಯು, ಚಾಸಾ.2 ನಾಗೇಶ್ ಹಾಗೂ ಚಾಸಾ.3 ಹೇಮಲತಾರವರು ಕೀರಾಡಿದಾಗ 1 ನೇ ಆರೋಪಿತರು ಚಾಸಾ.1 ಪ್ರೇಮ ಯು.ಆರ್ ರವರನ್ನು ಹಿಡಿದು ಸೂಳೇ ಮುಂಡೆ ದನಗಳನ್ನು ಬಿಟ್ಟು ನಮ್ಮ ಹೊಲದಲ್ಲಿ ತೆಂಗಿನ ಸಸಿಯನ್ನು ಕಡಿಸಿದ್ದೀಯಾ ಎಂದು ದೌರ್ಜನ್ಯ ಮಾಡುತ್ತಿದ್ದಾಗ ಅವರ ಮನೆಯವರಾದ 2, 3 ಹಾಗೂ 6 ನೇ ಆರೋಪಿತರು ಚಾಸಾ.1 ರಿಂದ 4 ರವರುಗಳನ್ನು ನಿಂದಿಸಿ ಮತ್ತು ಕೈಗಳಿಂದ ಹೊಡೆಯುತ್ತಿದ್ದಾಗ ಚೀರಾಟ ಕೇಳಿಸಿಕೊಂಡು ಚಾಸಾ.4 ರವರು ಬಂದು 1 ನೇ ಆರೋಪಿತರನ್ನು ಕೇಳಿದಾಗ ಏಕಾಏಕಿ ಚಾಸಾ.1 ರವರಿಗೆ ಸೊಂಟಕ್ಕೆ ಕಾಲಿನಿಂದ ಹೊದ್ದು ಇವರನ್ನು ಯಾರನ್ನು ಉಳಿಸಬಾರದು ಸೂಳೇ ಮುಂಡೆರಾ ನಿಮ್ಮನ್ನು ಜೆಸಿಪಿಯಿಂದ ಮನೆಯನ್ನು ನಾಶ ಮಾಡುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿ ಚಾಸಾ.1 ಪ್ರೇಮ ಆರ್.ಯು ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು ಎಂಬುದನ್ನು ರುಜುವಾತು ಪಡಿಸಬೇಕಾಗಿದೆ.

**12.**ಆರೋಪಿತರ ವಿರುದ್ಧದ ಅಪಾದನೆಗಳನ್ನು ರುಜುವಾತುಪಡಿಸಲು ಅಭಿಯೋಜನೆಯವರು ಪ್ರಾಸಾ-1 ರಿಂದ 5 ರವರನ್ನು ವಿಚಾರಣೆ ಮಾಡಿದ್ದು ನಿಪಿ-1 ರಿಂದ 8 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

**13.** ಪ್ರಸ್ತುತ ಪ್ರಕರಣದಲ್ಲಿ ಉಭಯ ಪಕ್ಷಗಾರರ ವಾದ ಮಂಡನೆ ಮತ್ತು ಅಭಿಯೋಜನೆ ವಿಚಾರಿಸಲ್ಪಟ್ಟ ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

ಅಭಿಯೋಜನೆಯು ವಿಚಾರಣೆ ಮಾಡಲ್ಪಟ್ಟ ಪ್ರಾಸಾ-1/ಚಾಸಾ-1 ಪ್ರೇಮ ರವರು ಪಿರ್ಯಾದುದಾರರಾಗಿದ್ದು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ತನಗೆ ಇದೆ ಅವರು ತನ್ನ ಪಕ್ಕದ ಮನೆಯವರು, ಆರೋಪಿತರು ತನ್ನ ಪಕ್ಕದ ಮನೆಯವರಾಗಿದ್ದು, ನಮ್ಮ ಮತ್ತು ಅವರ ನಡುವೆ ಜಮೀನಿನ ಮತ್ತು ಬೇಲಿಯ ವಿಚಾರವಾಗಿ ಆಗಾಗ ಮಾತಿನ ಚಕಾಮಕಿ ನೆಡೆಯುತ್ತಿತ್ತು, ಇದರ ಸಂಬಂಧ ತಾನು ಕಿಬ್ಬನಹಳ್ಳಿ ಪೊಲೀಸ್ ಠಾಣೆಗೆ ಹೋಗಿ ಆರೋಪಿತರನ್ನು ಕರೆಸಿ ಬುದ್ದಿವಾದ ಹೇಳುವಂತೆ ತಿಳಿಸಿದ್ದು, ಆ ಕಾಲಕ್ಕೆ ಪೊಲೀಸರು ತನ್ನ ಸಹಿಗಳನ್ನು ಪಡೆದಿದ್ದು, ಸದರಿ ಸಹಿಗಳನ್ನು ಯಾವ ಕಾರಣಕ್ಕಾಗಿ ಪಡೆದಿರುತ್ತಾರೆಂದು ತನಗೆ ಗೊತ್ತಿಲ್ಲ, ತಾನು ಯಾವುದೇ ದೂರನ್ನು ಠಾಣೆಯಲ್ಲಿ ನೀಡಿರುವುದಿಲ್ಲ, ಹಾಗೂ ತನ್ನ ಸಮಕ್ಷಮ ಯಾವುದೇ ಸ್ಥಳ ಅಥವಾ ಅಮಾನತ್ತು ಪಂಚನಾಮೆ ಕ್ರಮ ಜರುಗಿಸಿರುವುದಿಲ್ಲ, ಹಾಗೂ ಯಾವುದೇ ವಾಹನವನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ, ಆರೋಪಿತರು ತನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಜೀವ ಬೆದರಿಕೆ ಹಾಕಿರುವುದಿಲ್ಲ, ಹೊಡೆದಿರುವುದಿಲ್ಲ ಮತ್ತು ತನ್ನ ಮಾನಕ್ಕೆ ಧಕ್ಕೆ ಉಂಟು ಮಾಡಿರುವುದಿಲ್ಲ, ಪೊಲೀಸರು ತನಗೆ ಹೇಳಿಕೊಟ್ಟಂತೆ ತಾನು ನ್ಯಾಯಾಧೀಶರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ, ಇದನ್ನು ಹೊರತು ಪಡಿಸಿ ತನಗೆ ಬೇರೆ ಯಾವುದೇ ಮಾಹಿತಿ ಇಲ್ಲ ಅಂಥ ಘಟನೆ ಕುರಿತು ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ

ನುಡಿಯದೇ ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದು, ಸದರಿಯವರನ್ನು ಮಾನ್ಯ ಸ.ಸ.ಅ. ರವರು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಿದರೂ ಸಹ ಘಟನೆ ಕುರಿತು ಪೂರಕವಾಗಿ ಸಾಕ್ಷಿ ನುಡಿದಿರುವುದಿಲ್ಲ ಸದರಿಯವರು ಪಾಟೀ ಸವಾಲಿನಲ್ಲಿ ಪಿರ್ಯಾದಿಯ ದೂರಿನ ಭಾಗವನ್ನು ನಿಪಿ-1 ರಲ್ಲಿ ಬರೆದ ವಿಷಯ ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿ ನಿರಾಕರಿಸಿರುತ್ತಾರೆ ಮತ್ತು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುತ್ತೇವೆಂದರೆ ಸರಿ ಅಂತಾ ಒಪ್ಪಿಕೊಂಡಿರುತ್ತಾರೆ.

**14.** ಫ್ರಾಸಾ-2/ಚಾಸಾ-2 ನಾಗೇಶ್, ಫ್ರಾಸಾ.3/ಚಾಸಾ.3 ಹೇಮಲತ, ಫ್ರಾಸಾ.4/ಚಾಸಾ.4 ನರಸಿಂಹಮೂರ್ತಿ ಮತ್ತು ಫ್ರಾಸಾ.5/ಚಾಸಾ.5 ಕೆಂಪರಾಜು ಇವರು ಘಟನೆಯಲ್ಲಿ ಪ್ರತ್ಯಕ್ಷ ಸಾಕ್ಷಿದಾರರು ಆಗಿದ್ದು ತಮ್ಮ ಸಾಕ್ಷ್ಯದಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ತಮಗೆ ಇದೆ ಅವರು ತಮ್ಮ ಸಂಬಂಧಿಕರು, ಈ ಪ್ರಕರಣದ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ ತಾವು ಯಾವುದೇ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ, ತಾವು ಪೊಲೀಸರ ಮುಂದೆ ತಮ್ಮ ಹೇಳಿಕೆಯನ್ನು ನೀಡಿರುವುದಿಲ್ಲ, ಸಾಕ್ಷಿಯು ಕಡತದಲ್ಲಿರುವ ಭಾವಚಿತ್ರದಲ್ಲಿನ ಆಟೋವನ್ನು ನೋಡಿ ಗುರುತಿಸಿರುವುದಿಲ್ಲ ಅಂತ ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ ನುಡಿದಿದ್ದು, ಷದ್ರಿಯವರನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಸ.ಸ.ಅ ರವರು ಪಾಟೀ ಸವಾಲು ಮಾಡಿದರು ಸಹ ಘಟನೆ ಕುರಿತು ಪೂರಕವಾದ

ಅಂಶವನ್ನು ಹೊರಗೆಡವಿರುವುದಿಲ್ಲ. ಅಷ್ಟೇಅಲ್ಲದೇ ತಾವು ನೀಡಿದ ಹೇಳಿಕೆಯನ್ನು ನಿರಾಕರಿಸಿರುತ್ತಾರೆ. ತಾವು ಮತ್ತು ಆರೋಪಿತರು ರಾಜಿಯಾಗಿರತ್ತೇವೆಂದರೆ ಸರಿ ಅಂತಾ ಸಾಕ್ಷ್ಯ ನುಡಿದಿರುತ್ತಾರೆ.

**15.** ಅಭಿಯೋಜನೆಯ ಸಾಕ್ಷ್ಯವನ್ನು ಸಮಗ್ರವಾಗಿ ಗಮನಿಸಿದಾಗ ಪ್ರಾಸಾ-1/ಚಾಸಾ-1 ರವರು ಪಿರ್ಯಾದಿದಾರರಾಗಿದ್ದು. ಪ್ರಾಸಾ-2 ರಿಂದ ಪ್ರಾಸಾ.5 ರವರು ಘಟನೆಯಲ್ಲಿ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಸದರಿ ಸಾಕ್ಷಿಗಳು ಅಭಿಯೋಜನೆಗೆ ಘಟನೆ ಕುರಿತು ಪೂರಕವಾಗಿ ಸಾಕ್ಷಿ ನುಡಿಯದೇ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಸದ್ರಿಯವರನ್ನು ಪ್ರತಿಕೂಲ ಸಾಕ್ಷಿ ಅಂಥ ಪರಿಗಣಿಸಿ ಸ.ಸ.ಅ. ರವರು ಪಾಟೀಸವಾಲು ಮಾಡಿದರು ಸಹ ಘಟನೆ ಕುರಿತು ಪೂರಕವಾದ ಅಂಶವನ್ನು ಹೊರಗೆಡವಿರುವುದಿಲ್ಲ. ಕಾರಣ ಪಿರ್ಯಾದುದಾರರಾದ ಪ್ರಾಸಾ-1/ಚಾಸಾ-1, ಪ್ರಾಸಾ.2/ಚಾಸಾ.2, ಪ್ರಾಸಾ.3/ಚಾಸಾ.3, ಪ್ರಾಸಾ.4/ಚಾಸಾ.4 ಮತ್ತು ಪ್ರಾಸಾ.5/ಚಾಸಾ.5 ರವರು ಘಟನೆಯ ಪ್ರತ್ಯಕ್ಷ ಸಾಕ್ಷಿದಾರರು ಮತ್ತು ಘಟನೆ ಕುರಿತು ಪ್ರತಿಕೂಲ ಸಾಕ್ಷಿಗಳಾಗಿ ನುಡಿದಿರುವುದರಿಂದ ಇನ್ನುಳಿದ ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿದ ಸಾಕ್ಷಿಗಳ ವಿಚಾರಣೆಯಿಂದ ಅಭಿಯೋಜನೆಯ ಪ್ರಕರಣಕ್ಕೆ ಯಾವುದೇ ರೀತಿಯಲ್ಲಿ ಸಹಾಯವಾಗುವುದಿಲ್ಲವೆಂದು ಪರಿಗಣಿಸಿ ಅವರ ಸಾಕ್ಷಿ ವಿಚಾರಣೆ ಕೈ ಬಿಡಲಾಗಿದೆ. ಅಷ್ಟೇಅಲ್ಲದೇ ಪ್ರಾಸಾ-1 ರಿಂದ ಪ್ರಾಸಾ-5 ರವರು ಘಟನೆ ಕುರಿತು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ

ದಂ.ಪ್ರ.ಸಂ ಕಲಂ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆಗೆ ವಿನಾಯಿತಿ ನೀಡಲಾಗಿದೆ. ಅಷ್ಟೇಅಲ್ಲದೇ ಫ್ರಾಸಾ-1 ರಿಂದ ಫ್ರಾಸಾ-5 ರವರು ಆರೋಪಿತರೊಂದಿಗೆ ರಾಜಿಯಾಗಿರುತ್ತೇವೆ ಅಂಥ ಒಪ್ಪಿಕೊಂಡಿರುತ್ತಾರೆ. ಆದಕಾರಣ ಫ್ರಾಸಾ-1 ರಿಂದ ಫ್ರಾಸಾ-5 ರವರ ಸಾಕ್ಷ್ಯ ಆರೋಪಿತರನ್ನು ಶಿಕ್ಷಿಸಲು ಸಾಕಷ್ಟು ಸಾಕ್ಷ್ಯವಲ್ಲ. ಕಾರಣ ಅಭಿಯೋಜನೆಯು ಆರೋಪಿತರ ಮೇಲೆ ಹೊರಸಿದ ಆರೋಪಿಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲವಾಗಿದೆ ಅಂತಾ ನಿರ್ಣಯಿಸಿ ಹೆಚ್ಚಿನ ಚರ್ಚೆ ಇಲ್ಲದೇ ಅಂಶ ನಂ.1 ರಿಂದ 6 ಗಳನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

**16.** <u>ಅಂಶ ನಂ.**7**</u> :- ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆಃ-

**:: ಆದೇಶ ::**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರ ಅಡಿಯಲ್ಲಿ ಆರೋಪಿತರ ವಿರುದ್ಧ ಮಾಡಲಾಗಿರುವ ಭಾರತೀಯ ನ್ಯಾಯಾ ಸಂಹಿತ ಕಲಂ 189(2), 115(2), 352, 126(2), 351(3), 74 ಸಹವಾಚಕ 190 ರಡಿಯಲ್ಲಿ ದೋಷಮುಕ್ತಗೊಳಿಸಿ ಆರೋಪಿತರನ್ನು ನಿರಪರಾಧಿಯೆಂದು ಬಿಡುಗಡೆ ಮಾಡಲಾಗಿದೆ.

ಹಿಂದೆ ನೀಡಿದ ಜಾಮೀನು ಮತ್ತು ಮುಚ್ಚಳಿಕೆಯು ಮೇಲ್ಮನವಿ ಸಲ್ಲಿಸುವ ಕಾಲಾ ಅವಧಿ ಮುಗಿಯುವರೆಗೂ ಅಥವಾ 6 ತಿಂಗಳವರೆಗೂ ಚಾಲ್ತಿಯಲ್ಲಿ ಇರುತ್ತದೆ.

(ತೀರ್ಪಿನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿದ ನಂತರ, ತಿದ್ದುಪಡಿಸಿ, ಸಹಿ ಮಾಡಿ, ಇಂದು ಅಂದರೆ ದಿನಾಂಕ 3 ನೇ ಜೂನ್ ಮಾಹೆ 2026 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಸಹಿ/-
(ಶ್ರೀ ಭರತ್ ಚಂದ್ರ ಕೆ.ಎಸ್)
ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ತಿಪಟೂರು.

**-:: ಅನುಬಂಧ ::-**

ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಹೆಸರು:-

ಫ್ರಾಸಾ-1 - ಪ್ರೇಮ
ಫ್ರಾಸಾ-2 - ನಾಗೇಶ
ಫ್ರಾಸಾ-3 - ಹೇಮಲತ
ಫ್ರಾಸಾ-4 - ನರಸಿಂಹಮೂರ್ತಿ
ಫ್ರಾಸಾ-5 - ಕೆಂಪರಾಜು

ಅಭಿಯೋಜನೆ ಪರ ಗುರುತಿಸಿಕೊಂಡ ದಾಖಲಾತೆಗಳು :-

ನಿಪಿ-1 - ದೂರು

ನಿಪಿ-1(ಎ) - ಫ್ರಾಸಾ.1 ರವರ ಸಹಿ

ನಿಪಿ-2 - ಸ್ಥಳ ಪಂಚನಾಮೆ

| | | |
|---|---|---|
| ನಿಪಿ-2(ಎ) | - | ಫ್ರಾಸಾ.1 ರವರ ಸಹಿ |
| ನಿಪಿ-3 | - | ಅಮಾನತ್ತು ಪಂಚನಾಮೆ |
| ನಿಪಿ-3(ಎ) | - | ಫ್ರಾಸಾ.1 ರವರ ಸಹಿ |
| ನಿಪಿ-4 | - | ಕಲಂ 183 ರಡಿಯಲ್ಲಿ ಫ್ರಾಸಾ.1 ರವರ ಹೇಳಿಕೆ |
| ನಿಪಿ-4(ಎ) | - | ಫ್ರಾಸಾ.1 ರವರ ಸಹಿ |
| ನಿಪಿ-4(ಬಿ) | - | ಫ್ರಾಸಾ.1 ರವರ ಸಹಿ |
| ನಿಪಿ-5 | - | ಫ್ರಾಸಾ.2 ರವರ ಹೇಳಿಕೆ |
| ನಿಪಿ-6 | - | ಫ್ರಾಸಾ.3 ರವರ ಹೇಳಿಕೆ |
| ನಿಪಿ-7 | - | ಫ್ರಾಸಾ.4 ರವರ ಹೇಳಿಕೆ |
| ನಿಪಿ-8 | - | ಫ್ರಾಸಾ.5 ರವರ ಹೇಳಿಕೆ |

ಅಭಿಯೋಜನೆ ಪರ ಗುರುತಿಸಲಾದ ಮು.ಮಾ ಪಟ್ಟಿ:-

ಇಲ್ಲ

ಆರೋಪಿತರ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಹೆಸರು

ಇಲ್ಲ

ಆರೋಪಿತರ ಪರ ಗುರುತಿಸಿಕೊಂಡ ದಾಖಲಾತಿಗಳು

ಇಲ್ಲ

ಸಹಿ/-
ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ತಿಪಟೂರು.